193

ಮೈಸೂರ ಗೆಜೆಟ್.

ನಂ. 13 ಸರ್ಕಾರದಿಂದ ಪ್ರಾಯಿಪ್ ಆದ್ದು. ಸನ್ 1876.

ಬೆಂಗಳೂರು, ಶನಿವಾರ, ಏಪ್ರೆಲ್ ತಾ|| 1, ಸನ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

	ಪುಟ
1ನೇ ಭಾಗ–ಮೈಸೂರು ವ ಕೊಡಗು ಕೀವೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು, ಇಂಡ್ಯ ಗವರ್ಣಮೆಂಟಿನವರ ಇಸ್ತಿಹಾರ್ ನಾಮೆಗಳು.	49—52
2ನೇ ಭಾಗ–ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಿಲ್ ಮೆಂಟ್ ಕಮ್ಮಿಷನರು, ಇನಾಂ ಸೂಪರ್ಟಿಂಡೆಂಟರು, ಡೆಪ್ಯೂಟಿ ಅಕ್ಕೌಂಟೆಂಟ್ ಜನರಲ್ಲವರು, ಮಣಿ ಆರ್ಡರ್ ಕಂಟ್ರೋಲರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮಿಲಿಟರಿ ಅಸಿಸ್ಟೆಂಟರು, ರಿಜಿಸ್ಟ್ರೇಷ್ ಇನ್‌ಸ್ಪೆಕ್ಟರ್ ಜನರಲ್ಲವೆರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಕ್ಯಸರ್ವೇಟರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು ಡಿವಿಜ್ ಜಾತ್ ಕಮ್ಮಿಷನರುಗಳು; ಡಿ|| ಡೆಪ್ಯೂಟಿ ಕಮ್ಮಿಷನರುಗಳು, ಪೊಲೀಸ್ ಸೂಪರ್ಟಿಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟ್‌ಗಳು; ಪೋಸ್ಟಾಫಿಸ್ ನೋಟಿಸ್‌ಗಳು. ..	141—151
3ನೇ ಭಾಗ–ಇಂಡ್ಯ ಗವರ್ಣಮೆಂಟಿನ ಮಂತ್ರಾಲೋಚಕ ಸಭೆಯವರ ಆಕ್ಟ್ಗಳು.	
4ನೇ ಭಾಗ–ಚಿಲ್ಲರೆ ವಿಷಯಗಳ ಕಾಗದ ಪತ್ರಗಳು.—	
ಸಪ್ಲಿಮೆಂಟ್—ಖುಲಾಸೇಯಾದ ಖೈದಿಗಳ ಜಹರೇ ಪಟ್ಟಿ.	

1ನೇ ಭಾಗ.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ತಾರೀಖು 13ನೇ ಮಾರ್ಚೀ 1876.

ನಂ. 389.

ಬಳ್ಳಾರೀ ಡಿಸ್ಟ್ರಿಕ್ಟು ಪೈಕೀ ಹಂಪೆ ಯೆಂಬ ಸ್ಥಳದಲ್ಲಿ ಅಥವಾ ಅದರ ಆಸ್ ಪಾಸ್ ಪ್ರದೇಶಗಳಲ್ಲಿ ಉಖಾಲ್ ಜ್ವಾಲಾ ಉಪದ್ರವ ವ್ಯಾಪಿಸಿ ಯಿರುವದಾಗಿ ವರ್ತಮಾನ ಬಂದಿರುವದರಿಂದ, 1876ನೇ ಇಸವಿ ಏಪ್ರೆಲ್ 8ನೇ ತಾರೀಖಿನಲ್ಲಿ ನಡೆಯುವ ಜಾತ್ರೆಗೆ ಹೋಗಬೇಕೆಂದು ಉದ್ದೇಶಿಸುವ ದಕೋಬಸ್ತು ಜನಗಳೂ, ಆ ಸ್ಥಳಕ್ಕೆ ಹೋಗೋಣದರಿಂದ ತಮಗೆ ಸಂಭವಿಸತಕ್ಕ ಅಪಾಯವನ್ನು ಕುರಿತು ಇದರ ದೆಸೆಯಿಂದ ಎಚ್ಚರಿಸಲ್ಪಟ್ಟಿರುತ್ತಾರೆ.

ನಂ. 396. ತಾರೀಖು 16ನೇ ಮಾರ್ಚೀ 1876.

ಇದರಿಂದ ಪ್ರಸಿದ್ಧ ಪಡಿಸುವದೇನಂದರೆ,—ಮೈಸೂರು ಡಿಸ್ಟ್ರಿಕ್ಟು ಚಾಮರಾಜನಗರ ವ ಗುಂಡ್ಲುಪೇಟೆ ತಾಲ್ಲೂಕುಗಳಲ್ಲಿ ಬಿದರಿನ ಮೇಲೆ ವಸೂಲಾಗುವ ಸೀನೀಯರೇಜ್ ತೀರ್ವೆಯು ಭಂಡೀ ಬೋಜೆ 1ಕ್ಕೆ 2½ ರೂಪಾಯಿ ಇದ್ದದ್ದನ್ನು 1¼ ರೂಪಾಯಿಗೆ ಕಮ್ಮೀ ಮಾಡಲ್ಪಟ್ಟಿದೆ.

ನಂ. 410. ತಾರೀಖು 24ನೇ ಮಾರ್ಚೀ 1876.

ಶಿವಮೊಗ್ಗಾ ಡಿಸ್ಟ್ರಿಕ್ಟು ಆಫಿಷಿಯೇಟಿಂಗ್ ಡಿಪ್ಯೂಟಿ ಕಮ್ಮಿಷನ್ನರ್ ಮೇಜರ್ ಬ್ಲೇಯರ್ ಸಾಹೆಬರಿಗೆ, 1876ನೇ ಏಪ್ರೆಲ್ 20ರ ಲಾಗಾಯತು ಅಥವಾ ಅವರು ಉಪಯೋಗಿಸಿಕ್ಕೊಳ್ಳುವ ತಾರೀಖು ಲಾಗಾಯತು 3 ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಸ್ಪೆಷಲ್ ಅಸಿಸ್ಟೆಂಟ್ ಕಮ್ಮಿಷನ್ನರ್ ಕನಿಂಗಹಾಂ ಸಾಹೆಬರು, ಮೇಜರ್ ಬ್ಲೇಯರ್ ಸಾಹೆಬರ ಗೈರ್ ಹಾಜರೀಯಲ್ಲಿ ಅಥವಾ ಮುತ್ತೊಂದು ಹುಕ್ಕುಂ ಕೊಡುವ ಪರಿಯಂತ ಶಿವಮೊಗ್ಗಾ ಡಿಸ್ಟ್ರಿಕ್ಟು ಡಿಪ್ಯೂಟಿ ಕಮ್ಮಿಷನ್ನರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ವೊಕರರ್.

ನಂ. 411. ತಾರೀಖು 27ನೇ ಮಾರ್ಚೀ 1876.

ಅಸಿಸ್ಟೆಂಟ್ ಕಮ್ಮಿಷನ್ನರ್ ಮೇಜರ್ ಲೋಗರ್ ಸಾಹೆಬರು 3ನೇ ಅಸಿಸ್ಟೆಂಟ್ ಕಮ್ಮಿಷನ್ನರ್ ಕೋರ್ಟು ವ ಬೆಂಗಳೂರು ಡಿಸ್ಟ್ರಿಕ್ಟು ಟ್ರೆಜರೀ ಚಾರ್ಜನ್ನು ಮೆಸ್ಟರ್ ಮಾಬ್ಲೆಯನವರಿಂದ 1876ನೇ ಇಸವಿ ಮಾರ್ಚೀ 13ನೇ ಮುಕ್ಕುಂ ಮುದ್ಯಾನ್ಹಕ್ಕೆ ಪೂರ್ವ ತೆಗದುಕ್ಕೊಂಡರು.

ನಂ. 413. ತಾರೀಖು 28ನೇ ಮಾರ್ಚೀ 1876.

ಮೈಸೂರು ಡಿಸ್ಟ್ರಿಕ್ಟ್ಕಿನಲ್ಲಿರುವ ಡಿಸ್ಟ್ರಿಕ್ಟು ಫಾರೆಸ್ಟು ಡಿಪೋಗಳೊಳಗೆ ತೇಗದ ಕೂಚಗಳಿಗೆ ಮೊಕರರ್ ಆಗತಕ್ಕ ದರಗಳು, 1876ನೇ ಏಪ್ರೇಲ್ ಗುರ್ರೇ ಲಾಗಾಯತು ಮತ್ತೊಂದು ಹುಕ್ಕುಂ ಕೊಡುವ ಪರ್ಯಂತ ಬಂಡೀ ಬೋಜೆ 1ಕ್ಕೆ 10 ರೂಪಾಯಿಗಳಿಂದ 8 ರೂಪಾಯಿಗಳಿಗೆ ಯಿಳಿಸಿ ಯಿರುತ್ತೆ.

ನಂ. 414. ತಾರೀಖು 29ನೇ ಮಾರ್ಚೀ 1876.

ಮೆಸ್ಟರ್ ಕಾಂಡಿ B. A. ಯವರು, ಮೈಸೂರೊಳಗೆ ರಾಜಾಸಾಹೆಬರವರ ಹೈಸ್ಕೂಲ್ ಹೆಡ್ ಮಾಸ್ಟರಾಗಿ ವೊಕರರ್.

ನಂ. 415. ತಾರೀಖು 29ನೇ ಮಾರ್ಚೀ 1876.

ಹೆಗ್ಗದೇವನಕೋಟೇ ತಾಲ್ಲೂಕು ಅಮಲ್ದಾರ್ ಅಬ್ದುಲ್‌ಖಾದರ್ ಯವರಿಗೆ ಅವರು ಉಪಯೋಗಿಸಿಕ್ಕೊಳ್ಳುವ ತಾರೀಖು ಲಾಗಾಯತು ಬಂದುವರೆ ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಚಾಮರಾಜನಗರ ತಾಲ್ಲೂಕು ಪೇಷ್ಕಾರ್ ಮಹಾ ಬಲರಾಯರವರು ಅಬ್ದುಲ್‌ಖಾದರ್ ಯವರ ಗೈರ್ ಹಾಜರೀಯಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರ್ಯಂತ ಹೆಗ್ಗದೇವನಕೋಟೆ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ವೊಕರರ್.

ನಂ. 416. ತಾರೀಖು 30ನೇ ಮಾರ್ಚೀ 1876.

ಚಿತ್ರದುರ್ಗ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ್ ಮೇಜರ್ ಆರ್ಮ್‌ಸ್ಟ್ರಾಂಗ್ ಸಾಹೆಬರು ಪ್ರಿವಿಲೀಜ್ ರಜಾದಿಂದ ವಾಪಸು ಬಂದು ಚಿತ್ರದುರ್ಗ ಡಿಸ್ಟ್ರಿಕ್ಟು ಟ್ರೆಜರಿ ಚಾರ್ಜನ್ನು 1876ನೇ ಇಸವಿ ಮಾರ್ಚೀ 16ನೇ ಮುಕ್ಕುಂ ಮುದ್ಯಾನ್ಹಕ್ಕೆ ಪೂರ್ವ ಮರಳಿ ವಹಿಸಿದರು.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.

ಕೊಡಗು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜ ನ ರ ಲ್.

ಇಸ್ತಿಹಾರ್ ನಾಮೆಗಳು.

ನಂ. 37. ತಾರೀಖು 30ನೇ ಮಾರ್ಚ್ 1876.

2ನೇ ಅಸಿಸ್ಟೆಂಟ್ ಸೂಪರ್‌ಟೆಂಡೆಂಟ್ ಮಿಸ್ಟರ್ ಸಿ. ಸುಬ್ಬಯ್ಯನವರು 1876ನೇ ಜನವರಿ 5 ರ ಲಾಗಾಯತು ಫಿಬ್ರವರೀ 3ನೇ ಮುಕ್ತಾಯ ವರಿಗೆ ಕೊಡಗು 1ನೇ ಅಸಿಸ್ಟೆಂಟ್ ಸೂಪರ್‌ಟೆಂಡೆಂಟರಾಗಿ ಆಕ್ಟಿಂಗ್ ತರೀಕ್ ಕೆಲಸನೋಡಿದರು.

"ಬವೋಜೀಬ್ ಹುಕ್ಕುಂ,"
T. CLARKE,
Offg. Secretary.

ಇಂಡ್ಯ ಗವರ್ನಮೆಂಟಿನವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಹೋಂ ಡಿಪಾರ್ಟ್‌ಮೆಂಟ್.

ಪಬ್ಲಿಕ್.

ಮೊಕ್ಕಾಂ ಫೋರ್ಟ್ ವಿಲಿಯಂ, ತಾರೀಖು 17ನೇ ಮಾರ್ಚ್ 1876.

ನಂ 406.—ಮಹಾ ಘನವನ್ನು ಹೊಂದಿದ ಪ್ರಿನ್ಸ್‌ಆಫ್‌ವೇಲ್ಸ್‌ರವರಿಂದ ಬಂದ ಈ ಕೆಳಗೆ ಕಂಡ ಲೆಟ್ಟರ್ ಸಕಲಜನಗಳಿಗೂ ತಿಳಿಯುವಬಗ್ಗೆ ಪ್ರಕಟಿಸುವ ವಿಷಯದಲ್ಲಿ ವೈಸರಾಯ್ ವ ಗವರ್ನರ್ ಜನರಲ್‌ಸಾಹೆಬ್ ಬಹದೂರವರು ಸಂತೋಷ ಯುಕ್ತರಾಗಿದ್ದಾರೆ;—

"ಸಿರಾಪಿಸ್" ಎಂಬ ಮಹಾರಾಣೀಯವರ ಹೊಗೇ ಜಾಹಜ್ ಮೊ॥ ಮುಂಬೈ ತಾ॥ 13ನೇ ಮಾರ್ಚ್ 1876.

ನನ್ನ ಪ್ರಿಯರಾದ ಲಾರ್ಡ್‌ನಾರ್ತ್‌ಬ್ರೂಕ್‌ಯವರಿಗೆ:— ಮನಃಪೂರ್ವಕವಾದ ಸಂತೋಷದಿಂದಲೂ, ವಿಶೇಷವಾದ ಅಕ್ಕರೆಯಿಂದಲೂ, ಅತಿಮುಹತ್ತಾದ ಮತ್ತು ಆಶ್ಚರ್ಯಕರವಾದ ಈ ದೇಶವನ್ನು ನೋಡಿದ ವಿಷಯವನ್ನು ಕುರಿತು, ವಿಸ್ತಾರವಾದ ಇಂಡ್ಯ ರಾಜ್ಯಕ್ಕೆ, ಮಹಾರಾಣೀಯವರ ಪ್ರತಿನಿಧಿಗಳಾದ ತಮಗೆ ತಿಳಿಸದೆ ಇಂಡ್ಯದೇಶದಿಂದ ಹೊರಡಲಾರೆನು.

ಮಹಾರಾಣೀಯವರ ರಾಜ್ಯಗಳ ಪೈಕೀ ದೂರಸ್ತವಾದ ಈ ಕೀಮೆಯಲ್ಲಿರುವ ಆಕೆಯವರ ಪ್ರಜೆಗಳನ್ನು ಕೇವಲ ವಿಶೇಷವಾಗಿ ಪರಿಚಯಮಾಡಬೇಕೆಂಬ ಉದ್ದೇಶ್ಯದಿಂದಲೂ, ದೇಶ ಸಂಚಾರ ಮಾಡಿದವರ ವಿಶೇಷಾವಧಾನಕ್ಕೆ ಯಾವಾಗ್ಯೂ ಲಕ್ಷಗಳಾಗಿದ್ದ ವಿಷಯಗಳನ್ನು ನಾನು ಖುದ್ದು ನೋಡಿ ಅಜಮಾಯಿಷೀ ಮಾಡುವ ಉದ್ದೇಶ್ಯದಿಂದಲೂ, ಇಂಡ್ಯದೇಶವನ್ನು ನೋಡಬೇಕೆಂದು ಈಗ್ಯೆ ಕೆಲವು ಸಂವತ್ಸರಗಳ ಮೊದಲು ನನಗೆ ಕೋರಿಕೆಯೂ ಅಪೇಕ್ಷೆಯೂ ಇರುವ ಸಂಗತಿ ತಮಗೂ ತಿಳಿದಿಯಿದೆಯಷ್ಟೆ.

ನಾನು ನೋಡಿದ್ದರಲ್ಲಿ ನನ್ನ ಪೂರ್ವೇಚ್ಛೆಯು ವಿಶೇಷವಾಗಿ ಫಲಿಸಿತೆಂದು ನಾನು ಮನಃಪೂರ್ವಕವಾಗಿ ಹೇಳಬಹುದಾಗಿದೆಯಾಗಿ, ನಾನು ಕಂಡುಕೇಳಿದ ಸರ್ವ ವಿಷಯಗಳೂ ಮನಸ್ಸಿನಲ್ಲಿ ದೃಢವಾಗಿ ನಾಟಿ ನಾನು ಸ್ವದೇಶಕ್ಕೆ ವಾಪಸ್ ಹೋಗುತ್ತಲಿದ್ದೇನೆ. ನಾನು ತಿಳಿದುಕ್ಕೊಂಡ ಅಂಶಗಳು, ನನಗೆ ಬಹಳ ಪ್ರಯೋಜನಕಾರಿಗಳಾಗಿ ಉತ್ತರೋತ್ತರ ನನಗೆ ಲಭಿಸುವದೆಂದು ನಾನು ಭಾವಿಸುವ ಒಹು ವಿಷಯಕ್ಕೆದು ಪ್ರಯೋಜನಕರವಾದ ಆಧಾರವಾಗಿರುತ್ತೆ.

ಇಲ್ಲಿನ ಅರಸರಿಂದಲೂ, ಸಂಸ್ಥಾನಾಧಿಪತಿಗಳಿಂದಲೂ, ಸಾಮಾನ್ಯವಾಗಿ ಪ್ರಜೆಗಳಿಂದಲೂ, ನಾನು ಮರ್ಯಾದೆಯೊಡನೆ ಬರಮಾಡಿಕ್ಕೊಳ್ಳಲ್ಪಟ್ಟ ವಿಷಯ, ಬಹಳ ಸಂತೋಷಕರವಾಗಿರುತ್ತೆ. ಯಾತಕ್ಕಂದರೆ, ಆ ಮೇರೆ ತೋರಿಸಲ್ಪಟ್ಟ ರಾಜಭಕ್ತಿಯು ಮಹಾರಾಣೀಯವರ ವಿಷಯದಲ್ಲೂ, ಬ್ರಿಟಿಷ್ ಸಂಸ್ಥಾನದ ವಿಷಯದಲ್ಲೂ, ಪ್ರೀತಿ ವಿಸ್ವಾಸಗಳನ್ನು ಪ್ರಕಟ ಪಡಿಸುತ್ತದೆ, ಇಂತಾ